ING Vysya LIFE INSURANCE

**NEWS RELEASE**

ಚಿತ್ರದುರ್ಗ, 12 ಜನವರಿ. 2009

## ಚಿತ್ರದುರ್ಗದಲ್ಲಿ ಕಾರ್ಯಾಚರಣೆ ಆರಂಭಿಸಿದ ಐ ಎನ್ ಜಿ ವೈಶ್ಯ ಲೈಫ್

ಐ ಎನ್ ಜಿ ಸಮೂಹದ ಭಾಗವಾದ ಐ ಎನ್ ಜಿ ವೈಶ್ಯ ಲೈಫ್, ಕರ್ನಾಟಕದ ಶಿವಮೊಗ್ಗ ಜಿಲ್ಲೆಯಲ್ಲಿ ತನ್ನ ಕಾರ್ಯಾಚರಣೆ ಆರಂಭಿಸಿರುವುದಾಗಿ ಇಂದಿಲ್ಲಿ ಪ್ರಕಟಿಸಿತು. ಸ್ಥಾಪಿತವಾಗಿರುವ ಹೊಸ ಕಚೇರಿಯ ವಿಳಾಸ **ಬಸವೇಶ್ವರ ಟಾಕೀಸ್ ರಸ್ತೆ, ವಾಸವಿ ಮಹಲ್ ಎದುರು.** ನಗರದ ಹೃದ್ಭಾಗದಲ್ಲಿರುವುದರಿಂದ ಗ್ರಾಹಕರಿಗೆ ಐ ಎನ್ ಜಿ ವೈಶ್ಯ ಲೈಫ್‌ನ ಉತ್ಪನ್ನಗಳು ಹಾಗು ಸೇವೆಗಳು ಸುಲಭವಾಗಿ ಲಭ್ಯವಾಗುತ್ತದೆ. ಈ ಹೊಸ ಕಚೇರಿಯು, ಈ ಸ್ಥಳದ ಜೀವಾ ವಿಮಾದಾರರ ವ್ಯಾಪಾರವನ್ನು ಬೆಂಬಲಿಸುತ್ತದೆ.

ಹೊಸ ಕಚೇರಿಯನ್ನು ಐ ಎನ್ ಜಿ ವೈಶ್ಯ ಲೈಫ್, **ಟೈಡ್ ಏಜೆನ್ಸಿಯ ಮಾರಾಟ ವಿಭಾಗದ ನಿರ್ದೇಶಕರಾದ ಶ್ರೀ ಟಿ.ಕೆ. ಉತ್ತಪ್ಪ ಮತ್ತು ಚಿತ್ರದುರ್ಗ ಶಾಸಕಾರದ ಶ್ರೀ ಎಸ್ ಕೆ ಬಸವರಾಜನ್ ಉದ್ಘಾಟಿಸಿದರು. ಮಾಧ್ಯಮವನ್ನು ಉದ್ದೇಶಿಸಿ ಮಾತನಾಡಿದ ಶ್ರೀ ಟಿ ಕೆ ಉತ್ತಪ್ಪ,** *" ಶಿವಮೊಗ್ಗೆಯಲ್ಲಿ ನಮ್ಮ ಕಚೇರಿ ಆರಂಭಿಸಿರುವುದನ್ನು ಪ್ರಕಟಿಸಲು ನನಗೆ ಹರ್ಷವಾಗುತ್ತದೆ. ಐ ಎನ್ ಜಿ ವೈಶ್ಯ ಲೈಫ್‌ಗೆ ಕರ್ನಾಟಕ ಒಂದು ಪ್ರಧಾನ ಮಾರುಕಟ್ಟೆ. ಈ ಪ್ರದೇಶದಲ್ಲಿ ನಾವು ವ್ಯಾಪಕ ಕಚೇರಿಗಳ ಕಾರ್ಯಜಾಲ ಹೊಂದಿದ್ದೇವೆ. ಹೀಗಾಗಿ ನಮ್ಮ ಗ್ರಾಹಕರಿಗೆ ಅತ್ಯುತ್ತಮ ಸೇವೆ ಸಲ್ಲಿಸಲು ನಾವು ಸಜ್ಜಾಗಿದ್ದೇವೆ."* ಎಂದರು.

ಈ ಪ್ರದೇಶದಲ್ಲಿ ಐ ಎನ್ ಜಿ ವೈಶ್ಯ ಲೈಫ್ ಅತ್ಯಂತ ಬೇಡಿಕೆಯಲ್ಲಿರುವ ಜೀವ ವಿಮೆ ಕಂಪನಿಯಾಗಿ ರೂಪುಗೊಂಡಿದೆ. ಬೆಳೆಯುವ ತನ್ನ ಈ ಪ್ರಯತ್ನದಲ್ಲಿ, ಸಂಸ್ಥೆಯು ತನ್ನ ಗ್ರಾಹಕರಿಗೆ ವಿನೂತನ ಉತ್ಪನ್ನಗಳನ್ನು ಒದಗಿಸುತ್ತಿದೆ. ಈ ಕುರಿತು ಮಾತನಾಡಿದ ಶ್ರೀ ಉತ್ತಪ್ಪ, *" ನಮ್ಮ ಗ್ರಾಹಕರ ದೀರ್ಘಕಾಲದ ಹಣಕಾಸಿನ ಅಗತ್ಯಗಳನ್ನು ಈಡೇರಿಸುವ ರೀತಿಯಲ್ಲಿ ನಮ್ಮ ಉತ್ಪನ್ನಗಳು ಹಾಗು ಸೇವೆಗಳು ರಚಿತವಾಗಿವೆ. ಈಗಾಗಲೇ ಇಲ್ಲಿ ಸೇವಾನಿರ್ತ ವೃತ್ತಿಪರ ಮಾರಾಟ ತಂಡವಿದ್ದು, ಚಿತ್ರದುರ್ಗದ ಗ್ರಾಹಕರಿಗೆ ಸೇವೆ ಒದಗಿಸಲು ಸಿದ್ಧವಾಗಿದೆ"* ಎಂದರು.

ಸೆಪ್ಟೆಂಬರ್ 2001 ರಲ್ಲಿ ಐ ಎನ್ ಜಿ ವೈಶ್ಯ ಲೈಫ್, ಭಾರತದಲ್ಲಿ ಖಾಸಗಿ ವಿಮೆ ಉದ್ದಿಮೆಯನ್ನು ಪ್ರವೇಶಿಸಿತು. ಭಾರತದಲ್ಲಿ ಪ್ರಬಲವಾದ ಖಾಸಗಿ ಜೀವವಿಮೆ ಕಂಪನಿಯಾಗಿ ಸ್ಥಾಪನೆಗೊಂಡು ಈಗ ತನ್ನ ಕಾರ್ಯಾಚರಣೆಯ **ಎಂಟನೆ** ವರ್ಷಕ್ಕೆ ಕಾಲಿಟ್ಟಿದೆ. ಐ ಎನ್ ಜಿ ವೈಶ್ಯ ಲೈಫ್ ಭಾರತದಾದ್ಯಂತ ಅಸ್ತಿತ್ವದಲ್ಲಿದೆ. ಅದರ ಉತ್ಪನ್ನ ವಿವರಗಳಿಗೆ **www.inglife.co.in** ಭೇಟಿ ಕೊಡಿ.

*ಮೂಲ : ಫಾರ್ಚ್ಯೂನ್ ಗ್ಲೋಬಲ್ 500, ಜುಲೈ 2007*


**ಪತ್ರಿಕಾ ವಿಚರಣೆಗಳಿಗೆ :**

**ಐ ಎನ್ ಜಿ ವೈಶ್ಯ ಲೈಫ್**

**ಸೋನಿಯಾ ಶರ್ಮ,** 080 2532 8000, sonia.sharma@inglife.co.in

**ಹ್ಯಾನ್ಮರ್ ಮತ್ತು ಪಾರ್ಟ್ನರ್ಸ್**

**ಕಾವೇರಿ ನಾಣಯ್ಯ,** 98866 52327, cauvery@hanmerpr.com

ING Vysya
LIFE INSURANCE

NEWS RELEASE

***ಐ ಎನ್ ಜಿ ಸಮೂಹ ಕುರಿತು***

ಡಚ್ ಮೂಲದ ಜಾಗತಿಕ ಹಣಕಾಸು ಸಂಸ್ಥೆಯಾದ ಐ ಎನ್ ಜಿ, ಬ್ಯಾಂಕಿಂಗ್, ವಿಮೆ ಹಾಗು ಆಸ್ತಿ ನಿರ್ವಹಣೆ ಕ್ಷೇತ್ರಗಳಲ್ಲಿ 50 ಕ್ಕೂ ಹೆಚ್ಚು ದೇಶಗಳಲ್ಲಿ 85 ದಶಲಕ್ಷಕ್ಕೂ ಹೆಚ್ಚು ಖಾಸಗಿ, ಕಾರ್ಪೊರೇಟ್ ಹಾಗು ಸಾಂಸ್ಥಿಕ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದೆ. ಸುಮಾರು 150,000 ಜನರ ಕಾರ್ಯಪಡೆಯೊಂದಿಗೆ, ಐ ಎನ್ ಜಿ ಬ್ರ್ಯಾಂಡ್ ಅಡಿಯಲ್ಲಿ ಪ್ರಮುಖ ಕಮ್ಪನಿಗಳಿಗೆ ಸೇವೆ ಒದಗಿಸುತ್ತ ಬಂದಿದೆ.

***ಭಾರತದಲ್ಲಿ ಐ ಎನ್ ಜಿ ಕುರಿತು***

ಮೂರು ವ್ಯಾಪಾರ ವಿಭಾಗಗಳಾದ ಐ ಎನ್ ಜಿ ವೈಶ್ಯ ಜೀವ ವಿಮೆ, ಐ ಎನ್ ಜಿ ವೈಶ್ಯ ಬ್ಯಾಂಕ್ ಹಾಗು ಐ ಎನ್ ಜಿ ಬಂಡವಾಳಹೂಡಿಕೆ ನಿರ್ವಹಣೆ ಮೂಲಕ ಐ ಎನ್ ಜಿ ಭಾರತದಲ್ಲಿ ಕಾರ್ಯಾಚರಣೆ ನಡೆಸುತ್ತಿದೆ. 76 ವರ್ಷಗಳ ದೀರ್ಘ ಪರಂಪರೆ ಹಾಗು 1.5 ದಶಲಕ್ಷ ಸಂತೃಪ್ತ ಗ್ರಾಹಕರನ್ನುಳ್ಳ ಐ ಎನ್ ಜಿ ವೈಶ್ಯ ಬ್ಯಾಂಕ್, ಖಾಸಗಿ ಬ್ಯಾಂಕ್ ಕ್ಷೇತ್ರದಲ್ಲಿ ಪ್ರಮುಖ ಬ್ಯಾಂಕ್. ಐ ಎನ್ ಜಿ ಬಂಡವಾಳ ಹೂಡಿಕೆ ನಿರ್ವಹಣೆಯಲ್ಲಿ ಎರಡು ಕಾರ್ಯಾಚರಣೆಗಳಿವೆ : ಮಧ್ಯಮ ಗಾತ್ರದ ಆಸ್ತಿ ನಿರ್ವಹಣೆ ಕಂಪನಿಯಾದ ಐ ಎನ್ ಜಿ ಫಂಡ್ ಹಾಗು ವ್ಯಾಪಾರ ಕ್ಷೇತ್ರದ ಬಂಡವಾಳದಲ್ಲಿ ಆಪ್ಟಿಮಿಕ್ಸ್.